# ಕಾಂಪೌಂಡಿನಾಚೆಗಿನ ಕತ್ತಲು-ಬೆಳಕು

'ಕತ್ತಲಿನಿಂದ ಬೆಳಕಿಗೆ, ಬೆಳಕಿನಿಂದ ಕತ್ತಲಿಗೆ' ಎಂಬ ತತ್ತ್ವವನ್ನು ಅವರ ಬದುಕಿಗೆ ಅನ್ವಯಿಸಬಹುದು. ತುಸು ವೇಗವಾಗಿ ಮಾತನಾಡುವ ಅವರು ಗಡ್ಡಧಾರಿ. ನೆತ್ತಿ ಮೇಲೆ ಕೂದಲು ಕಡಿಮೆ. ಪ್ರಚಂಡ ಬುದ್ಧಿ. ಕೆಳಗಣ ಜಗತ್ತು, ಮೇಲಣ ಜಗತ್ತು ಎರಡರಲ್ಲೂ ಈಜಿದವರು. ಅವರ ಮನೆಯ ಕಾಂಪೌಂಡ್ ಕೂಡ ಉದ್ದವಿದೆ. ಫೀಲ್ಡಿಗೆ ಇಳಿದು ಅಭ್ಯಾಸವಿದ್ದ ಅವರು ಕಳೆದ ಕೆಲವು ವರ್ಷಗಳಿಂದ ಆಚೆ ಓಡಾಡುವಾಗ ಮೈಯೆಲ್ಲಾ ಕಣ್ಣಾಗುತ್ತಾರೆ. ಮೊದಲು ಬಂಟರು ವಸ್ತುಸ್ಥಿತಿ ಪರಿಶೀಲಿಸಿದ ನಂತರವೇ ಅವರು ಹೋಗಬೇಕಾದ ಸ್ಥಳ ತಲುಪುವುದು.

ಭಿನ್ನ ಜೀವನಾನುಭವ, ಅಕ್ಷರ ಮೋಹ, ಬೆದರಿಸಬಲ್ಲ ಜಾಣ್ಮೆ ಎಲ್ಲವೂ ಬೆರೆಸಿದ ವ್ಯಕ್ತಿತ್ವ. ಬೆಂಕಿಯಂಥ ಪತ್ರಿಕೆಯನ್ನು ಮಾಡಿ, ಸಮಾನಮನಸ್ಕರ ಜೊತೆ ಮಂಥನ ನಡೆಸಿದವರು. ಆರೋಗ್ಯ ಕಾಳಜಿಯನ್ನು ಕುರಿತ ಅವರ ಬರಹಗಳನ್ನು ಮೆಚ್ಚಿ ಓದಿದವರ ಸಂಖ್ಯೆ ದೊಡ್ಡದಿದೆ. ಪಾತಕಿಗಳ ಬದುಕನ್ನು ಹತ್ತಿರದಿಂದ ಕಂಡು, ಅವರ ಭಾವಸೂಕ್ಷ್ಮಗಳನ್ನು ಅರಗಿಸಿಕೊಂಡವರು. ತಮ್ಮ ಗತಕಾಲವನ್ನು ಆಪ್ತೇಷ್ಟರ ಬಳಿ ನೆನೆಯಲು ಹಿಂದೇಟು ಹಾಕುವುದಿಲ್ಲ.

ಇಷ್ಟೆಲ್ಲ ಹಿನ್ನೆಲೆ ಇರುವ ಗಡ್ಡಧಾರಿ, ಸಿನಿಮಾ ವಿದ್ಯಾರ್ಥಿಯೂ ಹೌದು. ಸಿನಿಮಾಗಳನ್ನು ನೋಡುವುದು; ತಲಸ್ಪರ್ಶಿಯಾಗಿ ಚರ್ಚಿಸುವುದನ್ನು ವ್ಯವಸ್ಥಿತವಾಗಿ ಮಾಡಿಕೊಂಡು ಬಂದವರು. ಶಿಷ್ಯೆಯ ಸಿನಿಮಾ ಆಸಕ್ತಿಗೂ ನೀರೆರೆದವರು. ಸಿನಿಮಾ ತಯಾರಿಕೆಯಲ್ಲೂ ಒಂದು ಕೈ ನೋಡಿದರು. ಸ್ನೇಹಿತನೇ ನಿರ್ಮಾಪಕ, ಸಾಹಿತಿಯೊಬ್ಬರ ಮೊಮ್ಮಗ ನಿರ್ದೇಶಕ. ಪಾತಕಲೋಕದವರ ಕಥಾನಕವಿದ್ದ ಆ ಸಿನಿಮಾ ಗೆದ್ದಿದ್ದೇ ಅವರ ಆಸಕ್ತಿಯ ಸಸಿಗೆ ಗೊಬ್ಬರ ಸಿಕ್ಕಂತಾಯಿತು.

ಪಾತಕಲೋಕದ ಸತ್ಯಗಳಿಗೆ ವ್ಯಂಗ್ಯದ ಲೇಪ ಕೊಡುವ ಬರವಣಿಗೆಯೂ ಅವರಿಗೆ ಗೊತ್ತು. ಸಮುದಾಯಗಳ ತಲ್ಲಣಗಳು, ಆ ದಿನಗಳ ಪೊಲೀಸ್ ಹಳವಂಡಗಳು, ರೌಡಿಗಳ ಮನೋನಂದನ ಎಲ್ಲದರ ಅರಿವಿದ್ದುದು ಬೋನಸ್ಸು. ಪಾತಕಿಗಳ ಕಲ್ಪನಾ ಕಥಾನಕಗಳನ್ನು ಹೆಣೆಯುತ್ತಿದ್ದ ಗಾಂಧಿನಗರದ 'ಟಿಪಿಕಲ್ ನಿರ್ದೇಶಕ'ರಿಗೆ ಅಸಲೀಯತ್ತು ಗೊತ್ತಿರಲಿಕ್ಕಿಲ್ಲ. ಈ ಕಾರಣಗಳಿಂದಾಗಿ ಅವರು ಕೊಟ್ಟ ಒನ್‌ಲೈನರ್‌ನ ಸಿನಿಮಾಗಳು ಜನಮನ ಗೆದ್ದವು. ದೊಡ್ಡ ಮಟ್ಟದ ಹಿಟ್ ಒಂದೇ ಬಂದರೂ ವೈವಿಧ್ಯಮಯ ಸಿನಿಮಾಗಳನ್ನು ಕೊಡಲು ಅದೇ ಕಸುವು ತುಂಬಿತು.

ಕನ್ನಡದ ಜನಪ್ರಿಯ ನಟರೊಬ್ಬರ ಕಾಲ್‌ಷೀಟ್ ಸಿಕ್ಕಿದ್ದೇ ಅವರೂ ನಿರ್ದೇಶಕನ ಟೋಪಿ ತೊಟ್ಟರು. ಕತ್ತಲು–ಬೆಳಕಿನ ಆ ಕಥಾನಕ ತೆರೆಕಂಡ ಮೇಲೆ ಅವರು ಪ್ರೇಕ್ಷಕರ ನಡುವೆ ಕೂತರು. ಕಾಗದದ ಮೇಲಿದ್ದ ಕಥಾನಕಕ್ಕೂ ತೆರೆಮೇಲೆ ಅದನ್ನು ತಾವು ತಂದದ್ದಕ್ಕೂ ವ್ಯತ್ಯಾಸ ಇದೆ ಎಂದು ಕೆಲವೇ ನಿಮಿಷಗಳಲ್ಲಿ ಸ್ಪಷ್ಟವಾಯಿತು. ತಾನು ಎಡವಿದ್ದೆಲ್ಲಿ ಎಂದು ಆತ್ಮವಿಮರ್ಶೆ ಮಾಡಿಕೊಳ್ಳುವ ಅವರು ಈಗಲೂ ದೊಡ್ಡ ಕಾಂಪೌಂಡ್ ಒಳಗಿನ ಮನೆಯಲ್ಲಿ ಸಿನಿಮಾ ಕುರಿತು ಯೋಚಿಸುವುದನ್ನಂತೂ ಬಿಟ್ಟಿಲ್ಲ.

● **ವಿಶಾಖ ಎನ್.**

Printed and Published by B.A. Ravi on behalf of **The Printers (Mysore) Private Ltd.** Printed at M/s.Geetanjali Graphics # B-71, New No.84, KSSIDC, Indl. Estate, 6th Block, Rajajinagar, Bengaluru-560010. and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: **K.N. SHANTH KUMAR.**

Editorial Office: 75, M.G Road, Bengaluru-560 001 E-mail:editormy@mayura.co.in. Phone: 2588 0000,
Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited. RNI No 17129/68